ಚಲೋ ಏಕ್ ಬಾರ್ ಫಿರ್ಸೆ ಅಜ್ನಬಿ
ಬನ್ ಜಾಯೆ ಹಮ್ ದೋನೋ

ಹೀಗೆ ಗುರಿ ಸಿಗದ ಜಾಡಿನಲ್ಲಿ ನಿರಂತರ ಪರಿಭ್ರಮಣೆಯಿಂದ ಸೋತು ಮತ್ತೊಮ್ಮೆ ಅಪರಿಚಿತರಾಗುವತ್ತ ತುಡಿಯುತ್ತಿದ್ದ ಹೃದಯವು ನಿರಾಶೆಯ ಮಡುವಿನಲ್ಲಿ ಜಾರುತ್ತಿದ್ದಾಗ ಕೊನೆಗೂ ಬಂತೊಂದು ಫೋನ್ ಕರೆ. ಆಕೆಯ ಸುತ್ತ ಬಣ್ಣಗಳು ಗರಿಕೆದರಿದವು. ಅವಳ ಕಣ್ಣಳತೆಯುದ್ದಕ್ಕೂ ಕಾಮನ ಬಿಲ್ಲು ಕಮಾನು ಕಟ್ಟಿತ್ತು. ಅವಳ ಹೆಜ್ಜೆಯು ನಿಲುಗಡೆರಹಿತವಾಯಿತು. ಮತ್ತೊಮ್ಮೆ ಯೌವನ ಮರುಕಳಿಸಿದಂತೆ ಅವಳ ಉತ್ಸಾಹವು ಮೇರೆ ಮೀರಿ ಚಿಮ್ಮಿತು. ಈ ಶುಭ ಸಂದೇಶವನ್ನು ಅವಳು ಗಂಡನ ಕಿವಿಯಲ್ಲಿ ಪಿಸುಗುಟ್ಟಿದಳು. ಮಗನ ಸಂಶಯಪೂರಿತ ನೋಟಕ್ಕೂ ಬೆದರದೆ ಅವಳು ಉಸುರಿದಳು. ಅಜ್ರಾಳಿಗಂತೂ ಈ ಸುದ್ದಿಯಿಂದ ಅತೀವ ಸಂತೋಷವಾಯಿತು. ಅವಳೆದೆಯಲ್ಲಿ ಕನಸುಗಳ ಹಕ್ಕಿ ಗೂಡು ಕಟ್ಟತೊಡಗಿತು. ಈ ವಿಷಯ ಸಾಧಿಕಾಳಿಗೆ ತಲುಪಿದಾಗ ಒಂದಿಷ್ಟು ಸಂತೋಷ, ಇನ್ನೊಂದಿಷ್ಟು ಈರ್ಷೆ ಮತ್ತೊಂದಿಷ್ಟು ತನ್ನನ್ನು ಬಿಟ್ಟು ರೆಹಮತ್‌ಳಿಗೆ ನೇರವಾಗಿ ವಿಷಯ ಮುಟ್ಟಿಸಿದರಲ್ಲ ಎಂದು ಅಸಹನೆ. ಈ ಎಲ್ಲರದ ನಡುವೆಯೂ ಅವಳು ಫೋನಿನಲ್ಲಿಯೇ 'ಮುಬಾರಕ್ ಹೋ' ಎಂದು ಉಳಿದ ಭಾವಗಳನ್ನು ಅವಿತಿಟ್ಟು ಸಂತಸವನ್ನು ಮಾತ್ರ ಚಿಮುಕಿಸಿದಳು.

ಅಂತೂ ಅಜ್ರಾಳ ಮದುವೆಗಾಗಿ ಗಂಡಿನ ಅನ್ವೇಷಣೆ ಕೊನೆಗೊಂಡಿತು. ಇನ್ನು ಏನಿದ್ದರೂ ಕೂಡಾ ಮುಂದಿನ ತಯಾರಿ. ರೆಹಮತ್‌ಳ ನಿರೀಕ್ಷೆ ಇನ್ನೊಂದು ಹಂತವನ್ನು ತಲುಪಿತು. ಈ ಜನ ಯಾವಾಗ ಬರುತ್ತಾರೆ. ಮಾತುಕತೆ ಯಾವಾಗ ಆಗಬೇಕು? ವರ ಯಾವಾಗ ಜರ್ಮನಿಯಿಂದ ಬರುತ್ತಾನೆ? ಆತ ಬರುವುದಕ್ಕೆ ಮೊದಲು ನಿಶ್ಚಿತಾರ್ಥವನ್ನು ಮಾಡಬೇಕೇ ಅಥವಾ ಅವನು ಬಂದ ನಂತರ ನಿಗದಿಗೊಳಿಸಬೇಕೆ? ಇವೆಲ್ಲಾ ಆತಂಕಗಳ ನಡುವೆ ಅವಳು ಸದಾಕಾಲ ಉದ್ವಿಗ್ನಳಾಗಿ ಇರುತ್ತಿದ್ದಳು. ಅವಳ ರಕ್ತದೊತ್ತಡ ಸದಾಕಾಲ ಏರುತ್ತಲೇ ಇರುತ್ತಿತ್ತು. ಗುಳಿಗೆಯ ಮೇಲೆ ಗುಳಿಗೆಯನ್ನು ನುಂಗುತ್ತಾ ಶಾಂತವಾಗಿರಲು ಪ್ರಯತ್ನಪಟ್ಟರೂ ಸದಾ ಕಾಲ ಆಸಿಫಾಳ ಫೋನ್ ಕರೆಯ ನಿರೀಕ್ಷೆಯೇ ಅವಳಿಗೆ ಇತ್ತು. ಈ ಮದುವೆಯ ಶ್ರೇಯಸ್ಸು ತನಗೆ ಸಂಪೂರ್ಣವಾಗಿ ಲಭಿಸುವುದಿಲ್ಲವೆಂದು ತಿಳಿದಿದ್ದ ಸಾದಿಕಾ ಕೂಡಾ ಮುಂದುವರೆದ ಪ್ರಯತ್ನದಲ್ಲಿ ಅಂತಹ ಉತ್ಸಾಹ ಮತ್ತು ಬೆಂಬಲವನ್ನು ಮುಂದುವರೆಸಲಿಲ್ಲ. ಹೀಗಾಗಿ ರೆಹಮತ್ ಏಕಾಂಗಿಯಾದಳು.

ರೆಹಮತ್‌ಳ ಉತ್ಸಾಹ ಆಕಾಶದೆತ್ತರಕ್ಕೆ ಏರಿದ್ದರೂ ಕೂಡಾ ನಯಾಜ್ ಮಾತ್ರ ಯಾವುದೇ ರೀತಿಯಲ್ಲಿ ತಾಯಿಯ ಪ್ರಯತ್ನದ ಸಫಲತೆಯನ್ನು ಒಪ್ಪಿಕೊಳ್ಳಲು ತಯಾರಿರಲಿಲ್ಲ. ವರ ಬಂದ ನಂತರ ಅವನೊಡನೆ ಭೇಟಿಯಾಗಿ ತನಗೆ ಸಮಾಧಾನವಾದರೆ ಮಾತ್ರ ಮುಂದಿನ ಹಂತದ ಮಾತುಕತೆ ಎಂದು ತಾಯಿಗೆ ತೀರಾ ಕಟ್ಟು ನಿಟ್ಟಾಗಿ ಹೇಳಿದ್ದೂ ಅಲ್ಲದೇ ಆನ್‌ಲೈನ್‌ನಲ್ಲಿ ತನ್ನ ವರಾನ್ವೇಷಣೆಯನ್ನು ಮುಂದುವರೆಸಿದ್ದ. ಆಸಿಫಾ ಮತ್ತು ಸಗೀರ್‌ನ ಫೋನ್‌ಗೆ ರೆಹಮತ್ ಕಾದೇ ಕಾದಳು. ಅವರಿಂದ ಮತ್ತೆ ಫೋನ್ ಕರೆ ಬರಲಿಲ್ಲವಾದ್ದರಿಂದ ಕೊನೆಗೆ ತಾನೇ ಫೋನ್ ಮಾಡಿ ಅನೀಸ್‌ನನ್ನು ಒಮ್ಮೆ ಕರೆಸಬೇಕೆಂತಲೂ ಅಥವಾ ಆತನು ಭಾರತಕ್ಕೆ ಮರಳಿ ಯಾವಾಗ ಬರುವನೆಂದು ನಿಗದಿಯಾಗಿದೆಯೋ ಆ ದಿನಾಂಕದ ನಂತರ ಮದುವೆಯ ಮಾತುಕತೆಯನ್ನು ಮುಂದುವರೆಸಬಹುದೆಂತಲೂ ಆದರೆ ತನ್ನ ಕುಟುಂಬದವರು ಅನೀಸ್‌ನನ್ನು ಒಮ್ಮೆ ಭೇಟಿಯಾದ ನಂತರ ಮುಂದಿನ ಮಾತುಕತೆಯನ್ನು ನಡೆಸಬಹುದೆಂದು